# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು: | ಶ್ರೀ ಛಲವಾದಿ ಟಿ ನಾರಾಯಣಸ್ವಾಮಿ, |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: | 103 |
| ಉತ್ತರಿಸ ಬೇಕಾದ ದಿನಾಂಕ: | 14.02.2024 |
| ಉತ್ತರಿಸುವ ಸಚಿವರು | ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕಿನ ಶನಿವಾರಸಂತೆ ಗ್ರಾಮ ಪಂಚಾಯಿತಿಗೆ ಒಳಪಡುವ ದುಂಡಳ್ಳಿಯಲ್ಲಿ ಹಾವಾಡಿಗ ಜನಾಂಗದ ಕುಟುಂಬಗಳು ಸೂಕ್ತ ನಿವೇಶನ / ಮೂಲಭೂತ ಸೌಕರ್ಯವಿಲ್ಲದೇ 50ಕ್ಕೂ ಅಧಿಕ ವರ್ಷಗಳಿಂದ ಪ್ಲಾಸ್ಟಿಕ್ ಗುಡಿಸಲುಗಳಲ್ಲೇ ವಾಸಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ಮತ್ತು ಇಲ್ಲಿ ವಾಸ ಮಾಡುತ್ತಿರುವ ಕುಟುಂಬಗಳ ಮಾಹಿತಿ ನೀಡುವುದು. | ಹೌದು.<br><br>ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕಿನ ದುಂಡಳ್ಳಿ ಗ್ರಾಮ ಪಂಚಾಯಿತಿಯ ಕಾಜೂರು ಗ್ರಾಮದ ಅರಣ್ಯ ಇಲಾಖೆಗೆ ಸೇರಿದ ಸರ್ವೆ ನಂ.23/2 ರಲ್ಲಿ ಸುಮಾರು ವರ್ಷಗಳಿಂದ 20 ಹಾವಾಡಿಗ ಕುಟುಂಬಗಳು ಸೂಕ್ತ ನಿವೇಶನ/ಮೂಲಭೂತ ಸೌಕರ್ಯಗಳಿಲ್ಲದೇ ಗುಡಿಸಲುಗಳಲ್ಲೇ ವಾಸವಾಗಿರುತ್ತಾರೆ. ಸದರಿ ಕುಟುಂಬಗಳಿಗೆ ಆಶ್ರಯ ಯೋಜನೆಯಡಿ ಸೂಕ್ತ ನಿವೇಶನ ಒದಗಿಸಲು 2017 ರಲ್ಲಿ ಗೌಡಹಳ್ಳಿ ಗ್ರಾಮ ಪಂಚಾಯಿತಿಯ ಅಜ್ಜಳ್ಳಿ ಗ್ರಾಮದ ಸರ್ವೆ ನಂ.44/1 ರಲ್ಲಿ 20 ನಿವೇಶನ/ಹಕ್ಕುಪತ್ರಗಳನ್ನು ಈಗಾಗಲೇ ಹಂಚಿಕೆ ಮಾಡಲಾಗಿರುತ್ತದೆ. ಆದರೆ ಈ ಕುಟುಂಬಗಳು ಸದರಿ ಪ್ರದೇಶಕ್ಕೆ ಹೋಗಿ ವಾಸಿಸಲು ನಿರಾಕರಿಸುತ್ತಿದ್ದಾರೆ. ಮುಂದುವರಿದು, ಸದರಿ ಕುಟುಂಬಗಳು ಪ್ರಸ್ತುತ ವಾಸವಿರುವ ಜಾಗದಲ್ಲಿ ಮೂಲಭೂತ ಸೌಲಭ್ಯಗಳಾದ ಬೀದಿ ದೀಪ ಮತ್ತು ಕುಡಿಯುವ ನೀರಿನ ಸೌಕರ್ಯವನ್ನು ದುಂಡಳ್ಳಿ ಗ್ರಾಮ ಪಂಚಾಯಿತಿಯಿಂದ ಒದಗಿಸಲಾಗಿದ್ದು, ಸದರಿ ಮನೆಗಳಿಗೆ ವಿದ್ಯುತ್ ಸಂಪರ್ಕ ಹಾಗೂ ಶೌಚಾಲಯ ನಿರ್ಮಾಣಕ್ಕೆ ಅರಣ್ಯ ಇಲಾಖೆ ಹಾಗೂ ಚೆಸ್ಕಾಂ ಶನಿವಾರಸಂತೆ ಹಾಗೂ ದುಂಡಳ್ಳಿ ಗ್ರಾಮ ಪಂಚಾಯಿತಿಗಳಿಂದ ಪತ್ರ ವ್ಯವಹಾರ ನಡೆಸಲಾಗಿದೆ ಎಂದು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಕೊಡಗು ಜಿಲ್ಲೆ ಇವರು ತಿಳಿಸಿರುತ್ತಾರೆ ಪ್ರತಿ ಒದಗಿಸಲಾಗಿದೆ.<br><br>ದುಂಡಳ್ಳಿಯಲ್ಲಿ ವಾಸಿಸುತ್ತಿರುವ 20 ಹಾವಾಡಿಗ ಕುಟುಂಬಗಳ ಪಟ್ಟಿಯನ್ನು ಲಗತ್ತಿಸಿದೆ. |
| ಆ) | ಅತ್ಯಂತ ಕಷ್ಟದಾಯವಾದ ಜೀವನ ನಡೆಸುತ್ತಿರುವ ಇವರುಗಳು ಗ್ರಾಮ ಪಂಚಾಯಿತಿ, ಜಿಲ್ಲಾ ಪಂಚಾಯಿತಿಯವರೆಗೂ ಅಲೆದಾಡಿ ತಮಗೆ ಮನೆ ನಿರ್ಮಿಸಿ ಕೊಡುವಂತೆ ಮನವಿ ಸಲ್ಲಿಸಿದ್ದರೂ ಕೂಡಾ ಕ್ರಮಕೈಗೊಳ್ಳದಿರಲು ಕಾರಣವೇನು; | |
| ಇ) | ಪ್ರತಿಯೊಬ್ಬರಿಗೂ ಅಗತ್ಯ ಮೂಲಸೌಲಭ್ಯ ಒದಗಿಸಬೇಕು ಹಾಗೂ ಗುಡಿಸಲು ಮುಕ್ತ ಪ್ರದೇಶ ಮಾಡಬೇಕು ಎಂದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ವಿವಿಧ ಯೋಜನೆಗಳ ಮೂಲಕ ವಸತಿ ಸೌಲಭ್ಯ ಕಲ್ಪಿಸುವ ಕೆಲಸ ಮಾಡುತ್ತಿದ್ದರೂ ಸಹ ಸುಮಾರು 50 ವರ್ಷಗಳಿಂದಲೂ ಇನ್ನೂ ಗುಡಿಸಲಿನಲ್ಲೇ ವಾಸ ಮಾಡುತ್ತಾ ಬೀದಿಯನ್ನೇ ಆಶ್ರಯ ಮಾಡಿಕೊಂಡಿರುವ ಈ ಬಡ ಜನರನ್ನು ಅಗತ್ಯ ಸೌಲಭ್ಯಗಳಿಂದ ನಿರ್ಲಕ್ಷಿಸಿದಂತೆ ಆಗುವುದಿಲ್ಲವೇ; | ಇವರುಗಳು ಅರಣ್ಯ ಇಲಾಖೆಗೆ ಸಂಬಂಧಪಟ್ಟ ಜಾಗದಲ್ಲಿ ಪ್ರಸ್ತುತ ವಾಸವಿದ್ದು, ಸರ್ಕಾರಿ ದಾಖಲೆಗಳಾದ ಆಧಾರ್ ಕಾರ್ಡ್, ರೇಷನ್ ಕಾರ್ಡ್, ಮತ್ತು ಮತದಾರ ಚೀಟಿಯನ್ನುಒದಗಿಸಿದ್ದು, ಶನಿವಾರ ಸಂತೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುತ್ತಾರೆ. ಮೂಲಭೂತ ಸೌಕರ್ಯಗಳಾದ ಬೀದಿ ದೀಪ, ಕುಡಿಯುವ ನೀರಿನ ಸೌಲಭ್ಯ ನೀಡಲಾಗಿರುತ್ತದೆ. ಮನೆಗಳಿಗೆ ವಿದ್ಯುತ್ ಸಂಪರ್ಕ ಹಾಗೂ ಶೌಚಾಲಯ ನಿರ್ಮಾಣ ಮಾಡುವ ಸಲುವಾಗಿ ಅರಣ್ಯ ಹಾಗೂ ಚೆಸ್ಕಾಂ ಇಲಾಖೆಗೆ ಶನಿವಾರ ಸಂತೆ ಹಾಗೂ ದುಂಡಳ್ಳಿ ಗ್ರಾಮ ಪಂಚಾಯಿತಿ ವತಿಯಿಂದ ಜಂಟಿಯಾಗಿ ಪತ್ರ ವ್ಯವಹಾರ ಮಾಡಲಾಗಿರುತ್ತದೆ. |

| | | |
|---|---|---|
| ಈ) | ಗ್ರಾಮಗಳು, ಪುರಸಭೆಗಳು, ನಗರಸಭೆಗಳು ಮತ್ತು ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲೂ ಸಹ ಈಗಲೂ ವಾಸಯೋಗ್ಯ ಪಕ್ಕಾ ಮನೆಗಳು ಇಲ್ಲದೆ ಜೀವನವನ್ನು ಸಾಗಿಸುತ್ತಿರುವವರ ಬಗ್ಗೆ ವರದಿ ಅಥವಾ ತನಿಖೆ ಮಾಡಲು ಸರ್ಕಾರವು ಒಂದು ಸಮಿತಿಯನ್ನು ರಚಿಸಲು ಕ್ರಮ ಕೈಗೊಳ್ಳುವುದೇ? | ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ 2018ರಲ್ಲಿ, ರಾಜ್ಯದಾದ್ಯಂತ ಗ್ರಾಮೀಣ ಪ್ರದೇಶದಲ್ಲಿ ವಸತಿ/ನಿವೇಶನ ರಹಿತರ ಸಮೀಕ್ಷೆಯನ್ನು ಕೈಗೊಳ್ಳಲಾಯಿತು. ಸದರಿ ಸಮೀಕ್ಷೆಯನ್ವಯ ರಾಜ್ಯದಲ್ಲಿ 18,92,756 ವಸತಿ ರಹಿತರು 7,13,950 ನಿವೇಶನ ರಹಿತರು ಕಂಡು ಬಂದಿದ್ದಾರೆ.<br><br>ನಗರ ಪ್ರದೇಶದಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ 2016-17 ಹಾಗೂ 2017-18ಸಾಲಿನಲ್ಲಿ ರಾಜ್ಯದಲ್ಲಿ ಬೇಡಿಕೆ ಸಮೀಕ್ಷೆ ನಡೆಸಲಾಗಿದ್ದು, ಸದರಿ ಸಮೀಕ್ಷೆಯ ಪ್ರಕಾರ 3,02,187 ವಸತಿ ರಹಿತರು ಹಾಗೂ 10,27,657 ನಿವೇಶನರಹಿತರು ಕಂಡು ಬಂದಿರುತ್ತಾರೆ.<br><br>ಸರ್ಕಾರವು ಪ್ರತಿ ವರ್ಷ ಮನೆಗಳ ಗುರಿಯನ್ನು ನಿಗಧಿಪಡಿಸಿದನ್ವಯ ವಸತಿರಹಿತರ ಸಂಖ್ಯೆಗೆ ಅನುಗುಣವಾಗಿ ಗ್ರಾಮ ಪಂಚಾಯಿತಿ/ನಗರ ಸ್ಥಳೀಯ ಸಂಸ್ಥೆವಾರು ಹಂಚಿಕೆ ಮಾಡಿ ಹಂತ-ಹಂತವಾಗಿ ಎಲ್ಲಾ ವಸತಿರಹಿತರಿಗೆ ವಸತಿ ಸೌಕರ್ಯ ಕಲ್ಪಿಸಲು ಕ್ರಮವಹಿಸಲಾಗುತ್ತಿದೆ. |

ಸಂ:ವಇ 29 ಹೆಚ್‌ಎಂ 2024

**(ಬಿ.ಜೆಡ್ ಜಮೀರ್ ಅಹ್ಮದ್ ಖಾನ್)**

ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ

ಸಚಿವರು

[illegible] ಆಯ್ಕೆ ಮಾಡಲಾದ ಕೊಡಗು ಜಿಲ್ಲೆಯ ಸೋಮವಾರಪೇಟೆ
ತಾಲ್ಲೂಕಿನ ಹಾವಾಡಿಗ ಜನಾಂಗದ 20 ಫಲಾನುಭವಿಗಳ ವಿವರ

| ಕ್ರ.ಸಂ | ಅಲೆಮಾರಿ/ಅರೆ ಅಲೆಮಾರಿ ಜನಾಂಗದ ಫಲಾನುಭವಿಗಳ ಹೆಸರು | ವರ್ಗ |
|---|---|---|
| 1 | ಶಶಿಕಲಾ W/o ಕುಮಾರ | ಮಹಿಳೆ |
| 2 | ಮಂಜುಳಾ W/o ಬಾಬು | ಮಹಿಳೆ |
| 3 | ಸುಶೀಲಾ W/o ಹರೀಶ | ಮಹಿಳೆ |
| 4 | ಚನ್ನಮ್ಮ W/o ಲೇಟ್ ಕೃಷ್ಣ | ಮಹಿಳೆ |
| 5 | ಸರಸ್ವತಿ W/o ಶಿವಾಜಿ | ಮಹಿಳೆ |
| 6 | ಶಾರಧ W/o ಶಿವ | ಮಹಿಳೆ |
| 7 | ಜ್ಯೋತಿ W/o ಮಂಜ | ಮಹಿಳೆ |
| 8 | ಬಂಗಾರಪ್ಪ S/o ಲೇಟ್ ವೆಂಕಟ | ಪುರುಷ |
| 9 | ರಂಗ S/o ವೆಂಕಟ | ಪುರುಷ |
| 10 | ರವಿ S/o ಲೇಟ್ ವೆಂಕಟ | ಪುರುಷ |
| 11 | ಸರೋಜಮ್ಮ W/o ಲೇಟ್ ಬಸವರಾಜ | ಮಹಿಳೆ |
| 12 | ಸುಶೀಲಾ W/o ಲಕ್ಷ್ಮಣ | ಮಹಿಳೆ |
| 13 | ಲತಾ W/o ವಸಂತ | ಮಹಿಳೆ |
| 14 | ತಾಯಮ್ಮ W/o ಲೇಟ್ ಚನ್ನಪ್ಪ | ಮಹಿಳೆ |
| 15 | ಶಾರದಮ್ಮ W/o ವೆಂಕಟೇಶ | ಮಹಿಳೆ |
| 16 | ಮಲ್ಲಕ್ಕ W/o ಚನ್ನಪ್ಪ | ಮಹಿಳೆ |
| 17 | ಅಕ್ಕಮ್ಮ W/o ಲೇಟ್ ಕಸ್ತೂರಿ | ಮಹಿಳೆ |
| 18 | ರೂಪಾ W/o ಸಂತೋಷ | ಮಹಿಳೆ |
| 19 | ಗಿರಿಜಾ W/o ಪರಮೇಶ | ಮಹಿಳೆ |
| 20 | ಮೋಹನ S/o ಲೇಟ್ ಪುಟ್ಟ | ಪುರುಷ |

ಜಿಲ್ಲಾ ಅಧಿಕಾರಿ,
ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾ
ಕಲ್ಯಾಣ ಇಲಾಖೆ,ಕೊಡಗು ಜಿಲ್ಲೆ,ಮಡಿಕೇ